# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1569

ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ

ಉತ್ತರಿಸುವ ದಿನಾಂಕ : 21-03-2025.
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿವಿಧ ರೀತಿಯ ಭಿಕ್ಷಾಟನೆಯನ್ನು ಹೋಲುವ ಅಸುರಕ್ಷಿತವಾದ ಕಡಿಮೆ ಮತ್ತು ಖಚಿತ ಆದಾಯವಿಲ್ಲದ ಚಟುವಟಿಕೆಗಳನ್ನು ನಿರ್ವಹಿಸುತ್ತಾ ಜೀವಿಸುತ್ತಿರುವ ಅಲೆಮಾರಿ ಸಮುದಾಯಗಳ ಅಭ್ಯುದಯಕ್ಕಾಗಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; (ಈ ಕುರಿತು ಸಮೀಕ್ಷಾ ವರದಿ ಸಹಿತ ವಿವರ ನೀಡುವುದು) | ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರನ್ವಯ ಭಿಕ್ಷಾಟನೆಯಲ್ಲಿ ತೊಡಗಿರುವ 16 ವರ್ಷಗಳ ಮೇಲ್ಪಟ್ಟ ಪುರುಷ ಅಥವಾ 18 ವರ್ಷಗಳ ಮೇಲ್ಪಟ್ಟ ಮಹಿಳೆಯರನ್ನು ರಕ್ಷಿಸಿ ನಿಯಮಾನುಸಾರ ತಾಲ್ಲೂಕು ದಂಡಾಧಿಕಾರಿಗಳ ಆದೇಶ ಪಡೆದು ಭಿಕ್ಷುಕರ/ ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿ ಇರಿಸಿ, ಉಚಿತ ಉಪಹಾರ, ಊಟ, ಸಮವಸ್ತ್ರ, ಹಾಸಿಗೆ-ಹೊದಿಕೆ, ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ. ರಕ್ಷಣೆಯಲ್ಲಿರುವ ನಿರಾಶ್ರಿತರಿಗೆ ವಿವಿಧ ವೃತ್ತಿಗಳಲ್ಲಿ ತರಬೇತಿಗಳನ್ನು ನೀಡಲಾಗುತ್ತಿದ್ದು, ದಿನಭತ್ಯೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.<br><br>ವಿವಿಧ ರೀತಿಯ ಭಿಕ್ಷಾಟನೆಯನ್ನು ಹೋಲುವ ಆಸುರಕ್ಷಿವಾದ ಕಡಿಮೆ ಮತ್ತು ಖಚಿತ ಆದಾಯವಿಲ್ಲದ ಚಟುವಟಿಕೆಗಳನ್ನು ನಿರ್ವಹಿಸುತ್ತಾ ಜೀವಿಸುತ್ತಿರುವ ಅಲೆಮಾರಿ ಸಮುದಾಯಗಳ ಅಭ್ಯುದಯಕ್ಕಾಗಿ ಕಾರ್ಯಗಳನ್ನು ನಡೆಸಲು ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ಕಾಯಿದೆಯಲ್ಲಿ ಅವಕಾಶ ಇರುವುದಿಲ್ಲ. |
| ಆ) | ಸರ್ಕಾರದ ಅಧಿಸೂಚನೆ ಸಂಖ್ಯೆ: ಎಸ್.ಡಬ್ಲ್ಯುಡಿ: 15: ಎಸ್.ಬಿಆರ್:97 ದಿನಾಂಕ:28-08-1997 ರಲ್ಲಿ ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರ ಕಾಯಿದೆಯನ್ನು ದಿನಾಂಕ:28-08-1997 ರಿಂದ ಜಾರಿಗೆ ಬರುವಂತೆ, ರಾಜ್ಯದಾದ್ಯಂತ ವಿಸ್ತರಿಸಿದ್ದರೂ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೆಚ್ಚಿನ ನಗರ ಪ್ರದೇಶಗಳಲ್ಲಿ ಮತ್ತು ಧಾರ್ಮಿಕ ಕೇಂದ್ರ ಮತ್ತು ಹಲವು ಜಾತ್ರೆಗಳಲ್ಲಿ ಹಲವಾರು ನಿರಾಶ್ರಿತರು ಮತ್ತು ಭಿಕ್ಷುಕರು ಭಿಕ್ಷೆಬೇಡುತ್ತಿರುವ ಬಗ್ಗೆ ಸರ್ಕಾರ ಏನು ಕ್ರಮವಹಿಸುತ್ತಿದೆ; (ವಿವರ ನೀಡುವುದು). | ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರ ಕಾಯಿದೆ ರಾಜ್ಯಾದ್ಯಂತ ಜಾರಿಯಲ್ಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರಾಶ್ರಿತರ ಪರಿಹಾರ ಕೇಂದ್ರ, ಪಚ್ಚನಾಡಿ ಗ್ರಾಮ, ವಾಮಂಜೂರ್ ಅಂಚೆ, ಮಂಗಳೂರು, ದಕ್ಷಿಣ ಕನ್ನಡ-575028 ಇಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಸದರಿ ಕೇಂದ್ರಕ್ಕೆ ಮಂಗಳೂರು (ದ.ಕನ್ನಡ) ಹಾಗೂ ಉಡುಪಿ ಜಿಲ್ಲಾ ವ್ಯಾಪ್ತಿಯಲ್ಲಿ ಭಿಕ್ಷೆ ಬೇಡುತ್ತಿರುವವರನ್ನು ನಿಯಮಾನುಸಾರ ಬಂಧಿಸಿ ಕೇಂದ್ರ ರಕ್ಷಣೆಯಲ್ಲಿ ಇರಿಸಲು ಕ್ರಮವಹಿಸಲಾಗುತ್ತಿದೆ.<br><br>ಉಡುಪಿ ತಾಲ್ಲೂಕಿನ ಹೆಬ್ರಿ ತಾಲ್ಲೂಕು ಬೇಳಂಜೆ ಗ್ರಾಮದಲ್ಲಿ ಸರ್ಕಾರಿ ಜಮೀನು ಮಂಜೂರಾಗಿದ್ದು, ನಿಯಮಾನುಸಾರ ಹೊಸದಾಗಿ ನಿರಾಶ್ರಿತರ ಪರಿಹಾರ ಕೇಂದ್ರವನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. |

<table>
<tr>
<td>ಇ)</td>
<td>ಕೇಂದ್ರ ಪರಿಹಾರ ಸಮಿತಿಗೆ ರಾಜ್ಯದ ಸ್ಥಳೀಯ ಸಂಸ್ಥೆಗಳಿಂದ ಮತ್ತು ಇತರ ಮೂಲಗಳಿಂದ ಸಂಗ್ರಹವಾಗುವ ಮೊತ್ತವೆಷ್ಟು? ಅವುಗಳನ್ನು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ; (ಕಳೆದ ಮೂರು ವರ್ಷಗಳ ವಿವರ ನೀಡುವುದು.</td>
<td>ಕೇಂದ್ರ ಪರಿಹಾರ ಸಮಿತಿಯು ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಲಾದ ಹಾಗೂ ಕೇಂದ್ರಗಳ ನಿರ್ವಹಣೆಗಾಗಿ (ನಿರಾಶ್ರಿತರಿಗೆ ಊಟ, ಸಮವಸ್ತ್ರ, ಹಾಸಿಗೆ ಹೊದಿಕೆ ಇನ್ನಿತರೇ ಮೂಲಭೂತ ಸೌಕರ್ಯ ಒದಗಿಸಲು) ವೆಚ್ಚ ಮಾಡಲಾದ ವಿವರ ಈ ಕೆಳಕಂಡಂತೆ ಇರುತ್ತದೆ.<br>(ರೂ.ಲಕ್ಷಗಳಲ್ಲಿ)
<table>
<tr><th>ವರ್ಷವಾರು</th><th>ಸಂಗ್ರಹಿಸಲಾದ ಮೊತ್ತ</th><th>ವೆಚ್ಚ ಮಾಡಲಾದ ಮೊತ್ತ</th></tr>
<tr><td>2021-22</td><td>7231.80</td><td>6372.26</td></tr>
<tr><td>2022-23</td><td>10020.12</td><td>10452.63</td></tr>
<tr><td>2023-24</td><td>17476.42</td><td>13797.65</td></tr>
</table>
</td>
</tr>
<tr>
<td>ಈ)</td>
<td>ಸಮಾಜ ಕಲ್ಯಾಣ ಇಲಾಖೆ ಕೇಂದ್ರ ಪರಿಹಾರ ಸಮಿತಿಯ ಮೂಲಕ ಕರ್ನಾಟಕ ರಾಜ್ಯದಲ್ಲಿ ಭಿಕ್ಷಾಟನೆ ನಿಯಂತ್ರಿಸಲು ಮತ್ತು ಅಂತಿಮವಾಗಿ ನಿರ್ಮೂಲನೆಗೊಳಿಸಲು ನಿರಂತರವಾಗಿ ಕೈಗೊಂಡ ಕಾರ್ಯಕ್ರಮಗಳೇನು; ಇಲ್ಲಿಯವರೆಗೆ ಎಷ್ಟು ಭಿಕ್ಷುಕರನ್ನು ಮುಖ್ಯವಾಹಿನಿಗೆ ತರಲಾಗಿದೆ; ಈ ಸಮುದಾಯವನ್ನೇ ನಿರ್ಧಿಷ್ಟವಾಗಿ ಗುರಿಯಾಗಿರಿಸಿ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ?</td>
<td>ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರಾಜ್ಯದಲ್ಲಿ ಜಾರಿಯಲ್ಲಿದ್ದು, ಸದರಿ ಅಧಿನಿಯಮದನ್ವಯ ಭಿಕ್ಷಾಟನೆಯಲ್ಲಿ ತೊಡಗಿರುವ 16 ವರ್ಷಗಳ ಮೇಲ್ಪಟ್ಟ ಹುಡುಗ ಅಥವಾ 18 ವರ್ಷಗಳ ಮೇಲ್ಪಟ್ಟ ಹುಡುಗಿಯರನ್ನು ರಕ್ಷಿಸಿ ನಿಯಮಾನುಸಾರ ತಾಲ್ಲೂಕು ದಂಡಾಧಿಕಾರಿಗಳ ಆದೇಶ ಪಡೆದು ಭಿಕ್ಷುಕರ/ ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿ ಇರಿಸಿ, ಉಚಿತ ಉಪಹಾರ, ಊಟ, ಸಮವಸ್ತ್ರ, ಹಾಸಿಗೆ-ಹೊದಿಕೆ, ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ.<br><br>ನಿರಾಶ್ರಿತರ ಪರಿಹಾರ ಕೇಂದ್ರಗಳಲ್ಲಿರುವ ನಿರಾಶ್ರಿತರುಗಳು ಬಿಡುಗಡೆಯಾದ ನಂತರ ಮತ್ತೆ ಭಿಕ್ಷಾಟನಾ ವೃತ್ತಿಗೆ ಮರಳಬಾರದೆಂಬ ಉದ್ದೇಶದಿಂದ ವಿವಿಧ ವೃತ್ತಿಪರ ತರಬೇತಿಗಳಾದ ಹೊಲಿಗೆ, ಕೃಷಿ ಮತ್ತು ತೋಟಗಾರಿಕೆ, ಪಶುಸಂಗೋಪನೆ, ಕುರಿ ಸಾಕಾಣಿಕೆ, ಹ್ಯಾಂಡ್ ಲೂಮ್ ಮತ್ತು ಪವರ್ ಲೂಮ್, ಕೈಮಗ್ಗ, ಸಿದ್ದ ಉಡುಪು ತಯಾರಿಕೆ, ತೆಂಗಿನನಾರಿನ ಮ್ಯಾಟ್ ತಯಾರಿಕೆ, ಫೆನಾಯಿಲ್, ಸೋಪ್ ಪೌಡರ್, ಬ್ಲಿಚಿಂಗ್ ಪೌಡರ್, ಇತ್ಯಾದಿ ಗೃಹೋಪಯೋಗಿ ವಸ್ತುಗಳ ತಯಾರಿಕೆ ಹಾಗೂ ಫೈಲ್ ರಾಪರ್ ತಯಾರಿಕಾ ಘಟಕಗಳಲ್ಲಿ ತರಬೇತಿ ನೀಡಲಾಗುತ್ತಿದೆ. ತರಭೇತಿ ನಿರತ ನಿರಾಶ್ರಿತರಿಗೆ ದಿನಭತ್ಯೆ ಪಾವತಿಸಲು ಕ್ರಮ ವಹಿಸಲಾಗುತ್ತಿದೆ.<br><br>ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರನ್ವಯ ಭಿಕ್ಷೆ ಬೇಡುವುದು ಒಂದು ಸಾಮಾಜಿಕ ಪಿಡುಗು ಆಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆ ಮಾಡುತ್ತಿರುವುದನ್ನು ಕಂಡು ಬಂದಲ್ಲಿ ತಕ್ಷಣ ಸಾರ್ವಜನಿಕರ ದೂರು ಆಧಾರಿಸಿ ಭಿಕ್ಷುಕರನ್ನು ಬಂಧಿಸಿ ನಿಯಮಾನುಸಾರ ಸ್ಥಳೀಯ ನಿರಾಶ್ರಿತರ ಪರಿಹಾರ ಕೇಂದ್ರಗಳ ರಕ್ಷಣೆಯಲ್ಲಿ ಇರಿಸಲು ಕ್ರಮ ವಹಿಸಲಾಗುತ್ತಿದೆ.<br><br>ಸಾರ್ವಜನಿಕರು ಭಿಕ್ಷುಕರಿಗೆ ಭಿಕ್ಷೇ ನೀಡುವುದರ ಮೂಲಕ ಪ್ರೋತ್ಸಾಹಿಸುತ್ತಿದ್ದು ಇದನ್ನು ತಡೆಯಲು ಭಿಕ್ಷಾಟನಾ ನಿಷೇಧ ಕಾಯಿದೆ 1975 ರ ಬಗ್ಗೆ ಅರಿವು ಮೂಡಿಸಲು ಪ್ರಸಿದ್ಧ ದಿನಪತ್ರಿಕೆಗಳು, ಹೋರ್ಡಿಂಗ್ಸ್, ಬಸ್ ಮತ್ತು ರೈಲು ನಿಲ್ದಾಣಗಳಲ್ಲಿ ಜಾಹಿರಾತು ಫಲಕಗಳು, ಎಲ್.ಇ.ಡಿ ವಾಹನಗಳು, ವಿವಿಧ ಮಾಧ್ಯಮಗಳು ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲು ಕ್ರಮ ವಹಿಸಲಾಗುತ್ತಿದೆ.</td>
</tr>
</table>

**No: SWD/18/SBR/2025**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.